# ಬತ್ತಾಡ ಜನಾಂಗ–ಒಂದು ಅಧ್ಯಯನ

**ಮಂಜುನಾಥ ಕೆ.ಎಸ್.**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಭಂಡಾರ್ಕಾರ್ಸ್ ಕಲಾ ಮತ್ತು ವಾಣಿಜ್ಯ ಕಾಲೇಜು, ಕುಂದಾಪುರ.

**Received: 08/12/2024 ; Acepted:15/12/2024 ; Published: 09/01/2025**

**DOI: https://doi.org/10.5281/zenodo.14619547**

## ABSTRACT:

ಭಾರತದ ಮೇಲೆ ಪ್ರಭುತ್ವ ಸಾಧಿಸಲು ಬಂದ ಬ್ರಿಟಿಷರು ಸಾಮಾಜಿಕ ಕೆಳಸ್ತರದಲ್ಲಿರುವ ಜನರನ್ನು ಮತ್ತು ಅವರ ಜನಜೀವನವನ್ನು ಸಂಶೋಧನ ದೃಷ್ಟಿಯಿಂದ ನೋಡಿದರೆ ವಿನಃ ಈ ಜನರನ್ನು ಮುನ್ನೆಲೆಗೆ ತರುವ ಪ್ರಯತ್ನ ಪಡಲಿಲ್ಲ. ಹಿಂದಿನಿಂದ ಬಂದ ತಾರತಮ್ಯದ ವ್ಯವಸ್ಥೆಯನ್ನು ಹಾಗೆಯೇ ಮುಂದುವರಿಸಿದರು. ಹಾಗಾಗಿ ದೇಶದ ಮಹಾನ್ ನಾಯಕರಾದ ಮಹಾತ್ಮ ಗಾಂಧೀಜಿಯವರು ಬ್ರಿಟಿಷರ ಇಂತಹ ಮನೋಧ್ಯೇಯವನ್ನು ವಿರೋಧಿಸಿದರು. ಸ್ವಾತಂತ್ರ್ಯಪೂರ್ವದಲ್ಲಿ ಇಂಗ್ಲೀಷ್ ಶಿಕ್ಷಣ ಪಡೆದವರಲ್ಲಿ ಆಧುನಿಕ ಪ್ರಜ್ಞೆ ಬೆಳೆಯುತ್ತಿದ್ದ ಕಾಲದಲ್ಲಿ ಬತ್ತಾಡ ಜನ ಸಮುದಾಯಗಳ ಜೀವನದಲ್ಲಿ ಅಂತಹ ಗಮನಾರ್ಹವಾದ ಬದಲಾವಣೆಗಳೇನೂ ಆಗಿರಲಿಲ್ಲ. ಅಂದಿನ ಮುಖ್ಯ ಬೆಳವಣಿಗೆಯೆಂದರೆ ಉದಾರವಾದ ಮಾನವೀಯತೆಯಷ್ಟೇ. ಆದರೆ ದೇಶಕ್ಕೆ ಸ್ವಾತಂತ್ರ್ಯಬಂದ ನಂತರದಲ್ಲಿ ಸಂವಿಧಾನದ ಶಾಸನಗಳಿಂದ ಸಾಮಾಜಿಕ ಚಲನೆ ಕಾಣಿಸಿಕೊಂಡಿದ್ದು ಇತ್ತೀಚೆಗೆ ಸ್ವಲ್ಪಮಟ್ಟಿಗೆ ವ್ಯಕ್ತಿ ಸ್ವಾತಂತ್ರ್ಯದೊರಕಿದೆ.

ಈ ಜಾಗತೀಕರಣ, ಆಧುನೀಕರಣ, ಕೈಗಾರೀಕರಣ ಹಾಗೂ ಮಾಹಿತಿ ಸ್ಫೋಟದಿಂದ ಬತ್ತಾಡ ಸಮಾಜವು ಮತ್ತೆ ಹೊಸ ಮಾರ್ಗದಲ್ಲಿ ಚಲಿಸಲು ಪ್ರಾರಂಭಿಸಿದೆ. ಈ ಹೊಸ ಚಲನೆಯಿಂದ ಮತ್ತೆ ಆಗಬಹುದಾದ ಬದಲಾವಣೆಗಳಿಗಿಂತ ಮುಂಚೆಯೇ ಇಂದಿನ ಸಮುದಾಯದ ಸ್ಥಿತಿ–ಗತಿಯನ್ನು ದಾಖಲಾತಿ ಮಾಡುವುದು ಅವಶ್ಯಕವಾಗಿದೆ. ಬತ್ತಾಡ ಸಮಾಜದವರು ಜಿಲ್ಲೆಯಲ್ಲಿ ತನ್ನದೇ ಆದ ಪ್ರಮುಖ ಸ್ಥಾನವನ್ನು ಹೊಂದಿದ್ದಾರೆ. ಅವರಲ್ಲಿನ ಅನೇಕ ಆಚರಣೆಗಳು ಮತ್ತು ಅವರ ಮೌಖಿಕ ಪರಂಪರೆಗಳು ಅವರ ಪ್ರಾಚೀನತೆಯನ್ನು ಸೂಚಿಸುತ್ತದೆ. ಇವರ ಮದುವೆ ಸಂಪ್ರದಾಯ, ಆಹಾರ ಪದ್ಧತಿ, ಬಾಲ್ಯ ವಿವಾಹ, ಅನಕ್ಷರತೆ, ನ್ಯಾಯ ಪಂಚಾಯಿತಿ ಮುಂತಾದವುಗಳ ನಿರ್ವಹಣಾ ವಿಧಾನಗಳು ನನ್ನಲ್ಲಿ ಕುತೂಹಲವನ್ನು ಹೆಚ್ಚಿಸಿದ್ದು ಈ ಅಧ್ಯಯನವನ್ನು ಕೈಗೊಳ್ಳಲು ಪ್ರೇರಕನಾಗಿದ್ದೇನೆ.

## KEYWORDS:

ಅಡ, ಮುನ್ನೆಲೆ, ಮಜಲು, ಗುರಿಕಾರ, ಶಿಷ್ಟ ಹಬ್ಬ.

ಶಿವಮೊಗ್ಗ ಜಿಲ್ಲೆಯ ಹೊಸನಗರ ಮತ್ತು ತೀರ್ಥಹಳ್ಳಿ ಹಾಗೂ ಉಡುಪಿ ಜಿಲ್ಲೆಯ ಬ್ರಹ್ಮಾವರ ಮತ್ತು ಕುಂದಾಪುರ ಭಾಗದಲ್ಲಿ ನಲೆಸಿರುವ ಬತ್ತಾಡ ಜನಾಂಗದ ಕುರಿತು ಪರಿಪಕ್ವವಾದ ಅಧ್ಯಯನಗಳು ಇದುವರೆಗೂ ನಡೆದಿಲ್ಲ. ಈ ಸಮಾಜದ ಮೂಲ, ಅವರ ಸಂಪ್ರದಾಯ, ಆಚರಣೆ, ಚರಿತ್ರೆ ಮತ್ತು ಸಾಂಸ್ಕೃತಿಕ ಹಿನ್ನೆಲೆ ಹಾಗೂ ಅವರ ಆರ್ಥಿಕ ಸಾಮಾಜಿಕ ಮತ್ತು ಧಾರ್ಮಿಕ ಸ್ಥಾನಮಾನಗಳನ್ನು ಕುರಿತು ಒಂದು ರೀತಿಯ ದಾಖಲೆಗಳೇ ಹೊರತು ಯಾವುದೇ ಸ್ಪಷ್ಟ ವಿಮರ್ಶೆಯನ್ನಾಗಲಿ, ವಿಶ್ಲೇಷಣೆಯನ್ನಾಗಲಿ, ನೀಡುವಲ್ಲಿ ಇವು ವಿಫಲವಾಗಿದೆ.

ಬತ್ತಾಡ ಸಮುದಾಯದ ಕುರಿತು ಸತ್ಯಾಸತ್ಯತೆಗಳ ಕೂಲಂಕಷ ಅಧ್ಯಯನ ಮತ್ತು ಪ್ರಾಮಾಣಿಕ ದಾಖಲೀಕರಣದ ಪ್ರಯತ್ನವಾಗಬೇಕಾದ ಅಗತ್ಯತೆ ಇದೆ. ಆದುದರಿಂದ ವಸ್ತುನಿಷ್ಟ ಮತ್ತು ಕ್ರಿಯಾಶೀಲ ದಾಖಲೀಕರಣದ ಸತ್ಯಶೋಧನೆಯ ಪ್ರಾಮಾಣಿಕ ಪ್ರಯತ್ನವೇ ಈ ಪ್ರಬಂಧದ ಉದ್ದೇಶವಾಗಿದೆ.

ಪ್ರಸ್ತುತ ಬತ್ತಾಡ ಸಮಾಜದ ಸಾಂಸ್ಕೃತಿಕ ಅಂಶಗಳನ್ನು ಅವುಗಳ ಮಹತ್ವ ಹಾಗೂ ವಿವಿಧ ಮಜಲುಗಳನ್ನು ಸೂಕ್ಷಾತಿ ಸೂಕ್ಷವಾಗಿ ಅಧ್ಯಯನ ಮಾಡುವ ಧ್ಯೇಯವನ್ನು ಈ ಸಂಶೋಧನೆಯು ಹೊಂದಿದೆ.

1981ರ ಜನಗಣತಿಯನ್ನು ಅನ್ವಯಿಸಿಕೊಂಡು ಕೆ.ಎಸ್. ಸಿಂಗ್‌ರವರು ಬತ್ತಾಡ ಜನಾಂಗದ ಕುರಿತು ದಾಖಲೆಯನ್ನು ಮಾಡಿದ್ದಾರೆ. ಸಿಂಗ್ ಕೆ.ಎಸ್. ರವರ 'ದಿಶೆಡ್ಯೂಲ್ಡ್ ಕಾಸ್ಟ್' (ಪೀಪಲ್ ಆಫ್ ಇಂಡಿಯಾ) ಪುಸ್ತಕದಲ್ಲಿ ಬತ್ತಾಡರ ಕುರಿತು ಎರಡೂವರೆ ಪುಟಗಳನ್ನು ಸಂಕ್ಷಿಪ್ತವಾಗಿ ಬರೆದಿದ್ದಾರೆ. 1981ರ ಗಣತಿ ಪ್ರಕಾರ ಈ ಸಮುದಾಯ 1026 ಜನ ಸಂಖ್ಯೆಯನ್ನು (491 ಗಂಡಸರು ಮತ್ತು 535)ಹೊಂದಿದ್ದರು. ಇವರ ಪ್ರಕಾರ ಬತ್ತಾಡರು ಲಿಂಗಾಯತ ಸಮಾಜದಿಂದ ಬಂದವರು. ಕೃಷಿ ಕೆಲಸಕ್ಕಾಗಿ ಕುಂದಾಪುರಕ್ಕೆ ವಲಸೆ ಬಂದು ಬದುಕುವುದಕ್ಕಾಗಿ ಅನಿವಾರ್ಯವಾಗಿ ಮೀನು ತಿನ್ನುವುದರ ಮೂಲಕ ಹಿಂದಿನ ಜಾತಿ ವ್ಯವಸ್ಥೆಯನ್ನು ಕೆಡಿಸಿಕೊಂಡು ಜಾತಿ ಹೀನರಾದರೆನ್ನುವುದನ್ನು ಉಲ್ಲೇಖಿಸಿದ್ದಾರೆ. ಅನಂತರದ ದಿನದಲ್ಲಿ ಬತ್ತಾಡರು ಮಾಂಸಹಾರವನ್ನು ಮುಂದುವರಿಸಿ ಮೀನು, ಕುರಿ, ಹಂದಿಯ ಸೇವನೆಯನ್ನು ಮಾಡಿದರು. ಬತ್ತಾಡ ಸಮಾಜದಲ್ಲಿ ಬಾಲ್ಯ ವಿವಾಹ ಪದ್ಧತಿಗಳು ನೆರವೇರುತ್ತಿದ್ದವು. ಹುಡುಗಿಯ ಮನೆಯಲ್ಲಿ ಮದುವೆ ನೆರವೇರುತ್ತದೆ. ವರದಕ್ಷಿಣೆ ಪದ್ಧತಿಯೂ ರೂಢಿಯಲ್ಲಿತ್ತು. ಬತ್ತಾಡರು ಗುರಿಕಾರರನ್ನು ಹೊಂದಿರುತ್ತಾರೆ. ಶಿವ ಮತ್ತು ಧರ್ಮಸ್ಥಳ ಮಂಜುನಾಥೇಶ್ವರನ ಪರಮಭಕ್ತರಾದ ಇವರು ಶಿಷ್ಟ ಹಬ್ಬಗಳನ್ನು ಚರಿಸುತ್ತಾರೆ. ಶೆಟ್ಟರು, ಬ್ರಾಹ್ಮಣರು, ಮೊಗವೀರರು ತಯಾರಿಸಿದ ಆಹಾರವನ್ನು ಮಾತ್ರ ಸ್ವೀಕರಿಸುತ್ತಾರೆಯೇ ವಿನಃ ಉಳಿದ ವರ್ಗದವರು ತಯಾರಿಸಿದ ಆಹಾರವನ್ನು

ಸ್ವೀಕರಿಸುವುದಿಲ್ಲ. ಮನೆತನದ ಅಧಿಕಾರ ಮತ್ತು ಧಾರ್ಮಿಕ ಆಚರಣೆಯನ್ನು ಮುನ್ನಡೆಸಿಕೊಂಡು ಹೋಗುವ ಜವಾಬ್ದಾರಿಯನ್ನು ಆ ಮನೆಯಲ್ಲಿರುವ ಸಹೋದರಿಯರ ಮಕ್ಕಳು ಹಕ್ಕನ್ನು ಪಡೆದುಕೊಳ್ಳುತ್ತಾರೆ. ಅಂದರೆ ಇವರು ಅಳಿಯ ಕಟ್ಟಿನ ಸಂತಾನದವರಾಗಿದ್ದಾರೆಂದು ತಿಳಿಸುತ್ತಾರೆ. ಶೇಕಡಾ ಇಪ್ಪತ್ತಾರರಷ್ಟು ಮಾತ್ರ ವಿದ್ಯಾವಂತರು ಈ ಜನವರ್ಗದಲ್ಲಿದ್ದಾರೆ. ಕುಂದಾಪುರ ಪರಿಸರದ ಆಸು-ಪಾಸಿನಲ್ಲಿ ನೆಲಸಿದ ಬತ್ತಾಡರ ಜೊತೆಗೆ ಮೇರ ಮತ್ತು ಆದಿದ್ರಾವಿಡ ಜನಾಂಗದವರು ವಾಸಿಸುತ್ತಿದ್ದಾರೆ. ಕೇರಳಕ್ಕೆ ವಲಸೆ ಹೋಗಿರುವ 46 ಬತ್ತಾಡರು ಮರಳಿ ಕುಂದಾಪುರಕ್ಕೆ ಬಂದಿದ್ದರೆನ್ನುವುದನ್ನು ತಮ್ಮ ಪುಸ್ತಕದಲ್ಲಿ ದಾಖಲಿಸಿದ್ದಾರೆ.

ಫ್ರಾನ್ಸಿಸ್ ಬುಕನನ್ ಎಮ್.ಡಿ. ಎನ್ನುವವರು 'ಜರ್ನಿ ಫ್ರಾಮ್ ಮದ್ರಾಸ್' ಎನ್ನುವ ತಮ್ಮ ಪುಸ್ತಕದಲ್ಲಿ ಬತ್ತಾಡರ ಕುರಿತು ಎರಡು ಪುಟಗಳ ವರದಿಯನ್ನು ದಾಖಲಿಸಿದ್ದಾರೆ. ದಕ್ಷಿಣಕನ್ನಡದ ತುಳುವ ಪರಿಶಿಷ್ಟ ಜಾತಿಯವರಲ್ಲಿ ಎರಡು ಮುಖ್ಯ ಜಾತಿಯೆಂದರೆ ಬತ್ತಾಡ ಮತ್ತು ಬಾಕುಡ ಜಾತಿ. ಈ ಎರಡು ಜಾತಿಗಳು ಸರಿಸುಮಾರು ಒಂದೇ ಸಮನಾದ ಆಚರಣೆಗಳನ್ನು ಹೊಂದಿದೆ. ಆದರೆ ಇವೆರಡು ಜಾತಿಯವರು ಪರಸ್ಪರ ಒಬ್ಬರು ತಯಾರಿಸಿದ ಆಹಾರವನ್ನು ಮತ್ತೊಬ್ಬರು ಸೇವಿಸುವುದಿಲ್ಲ. ತಮ್ಮ ಸಮಾಜದಲ್ಲಿ ಒಬ್ಬರಿಗೊಬ್ಬರು ಪರಸ್ಪರ ವಿವಾಹವಾಗುವುದಿಲ್ಲ. ಇವರು ಕೃಷಿ ಕೆಲಸದಲ್ಲಿ ನಿರತರಾದವರು. ಇವರಿಗೆ ಮನೆಯ ಒಡೆಯರು ಬೇಕಾಗಿರುವ ದವಸ ದಾನ್ಯಗಳನ್ನು ಕೊಡುತ್ತಾರೆ. ಕೆಲವು ಸಾರಿ ದವಸ ಧಾನ್ಯಗಳ ಬದಲಿಗೆ ಹಣವನ್ನು ನೀಡುತ್ತಿದ್ದರು. ಹಣದ ಲೆಕ್ಕಾಚಾರವು ಆ ಕಾಲದಲ್ಲಿ ಆಣೆಯ ರೂಪದಲ್ಲಿತ್ತು. ತಮ್ಮ ದುಡಿಮೆಯ ಸಂದರ್ಭದಲ್ಲಿ ಆಯಾಸವನ್ನು ಪರಿಹರಿಸಿಕೊಳ್ಳಲು ಜನಪದ ಹಾಡನ್ನು ಹಾಡುತ್ತಿದ್ದರು. ಈ ನಿಟ್ಟಿನಲ್ಲಿ ಬತ್ತಾಡ ಸಮಾಜದಲ್ಲಿ ಮೌಖಿಕ ಪರಂಪರೆಯನ್ನು ಗುರುತಿಸಬಹುದು.

ಕರಾವಳಿಯಲ್ಲಿ ಭತ್ತದ ಕೃಷಿ ಕಾರ್ಮಿಕರಾದ ಇವರನ್ನು ಶೂದ್ರರು, ಕೆಳಜಾತಿಯವರೆಂದು ಮೇಲ್ಜಾತಿಯ ಬ್ರಾಹ್ಮಣರು ಕರೆಯುತ್ತಿದ್ದರು. ಇವರಿಗೆ ಯಾವುದೇ ಗುರು ಪರಂಪರೆ ಇಲ್ಲ. ಸ್ಥಳೀಯರು ಆರಾಧನೆ ಮಾಡುವ ಭೂತಾರಾಧನೆಯನ್ನು ಇವರು ರೂಢಿಸಿಕೊಂಡಿದ್ದರು. ಇಲ್ಲಿಯ ಪ್ರದೇಶದಲ್ಲಿರುವಂತೆ ಇವರು ಮಾಂಸಾಹಾರವನ್ನು ಮಾಡುತ್ತಾರೆಂದು ಉಲ್ಲೇಖಿಸುತ್ತಾರೆ.

ಪಾ.ನ.ಮಯ್ಯರವರು 'ಕೋಟದವರು' ಎನ್ನುವ ತಮ್ಮ ಸಂಶೋಧನ ಪ್ರಬಂಧದಲ್ಲಿ ಪರಿಶಿಷ್ಟ ಜಾತಿಯವರ ಕುರಿತು ಉಲ್ಲೇಖಿಸಿದ್ದಾರೆ. ಆದರೆ ಈ ಕೋಟ ಪರಿಸರದಲ್ಲಿ ಬತ್ತಾಡ, ಮೇರ ಮತ್ತು ಆದಿದ್ರಾವಿಡ ಜನಾಂಗದವರು ನೆಲೆಸಿದ್ದಾರೆ. ಆದರೆ ಪಾ.ನ.ಮಯ್ಯರವರು ತಮ್ಮ 'ಕೋಟದವರು' ಸಂಶೋಧನ ಪ್ರಬಂಧದಲ್ಲಿ

ತಾನು ಪರಿಶಿಷ್ಟಜಾತಿಯ ಯಾವ ಉಪಜಾತಿಯವರ ಕುರಿತು ಉಲ್ಲೇಖಿಸಿದ್ದಾರೆನ್ನುವುದನ್ನು ನಿಖರವಾಗಿ ತಿಳಿಸಿಲ್ಲ. ಆದರೆ ಅವರು ದಾಖಲಿಸಿರುವ ಕೆಲವು ಸಂಪ್ರದಾಯಗಳು ಬತ್ತಾಡ ಜಾತಿಯವರಲ್ಲಿ ಈಗಲೂ ರೂಢಿಯಲ್ಲಿದೆ. ಎಡ್ಗರ್ ಥ್ರಸ್ಟನ್ 'ಬತ್ತ ಎನ್ನುವ ಜಾತಿಯ ಬಗ್ಗೆ ಉಲ್ಲೇಖ ಮಾಡಿದ್ದಾರೆ. 'ಬತ್ತ ಜಾತಿಯು ಗೌಡ ಜಾತಿಯಿಂದ ಕವಲೊಡೆದಿದ್ದು' ಎಂದು ವಿವರಣೆ ನೀಡಿದ್ದಾರೆ.

**ಬತ್ತಾಡ ಪದದ ಅರ್ಥ ಮತ್ತು ಜನಾಂಗದ ಪರಿಚಯ (Meaning of the Batha-da caste and introduction of the Bathada caste):**

ಉಡುಪಿ ಮತ್ತು ಶಿವಮೊಗ್ಗ ಜಿಲ್ಲೆಯ ಹೊಸನಗರ ಹಾಗೂ ತೀರ್ಥಹಳ್ಳಿ ಆಸುಪಾಸು ನೆಲೆಸಿರುವ ಬತ್ತಾಡ ಸಮಾಜದ ಸಂಸ್ಕೃತಿಯನ್ನು ಅನಾವರಣ ಗೊಳಿಸಬಲ್ಲ ಆಳವಾದ ಅಧ್ಯಯನದ ಅಗತ್ಯವಿದೆ. ಸಂಪ್ರದಾಯಗಳನ್ನು ರೂಢಿಸಿಕೊಂಡು ಬರುತ್ತಿರುವ ಹಿಂದಿನ ತಲೆಮಾರುಗಳು ಒಂದೊಂದಾಗಿ ಕೊನೆಗೊಳ್ಳುತ್ತಿದೆ. ಬತ್ತಾಡ ಜನಾಂಗದ ಪ್ರಧಾನ ವೃತ್ತಿ ಕೃಷಿ. ಕೃಷಿಯನ್ನೇ ನಂಬಿದವರ ಪಾಡು ಊಹಿಸಲು ಸಾಧ್ಯವಿಲ್ಲ. ಜಮೀನುದಾರರ ಭೂಮಿಯಲ್ಲಿ ದುಡಿಯುವ ಕಾರ್ಮಿಕರು ಬತ್ತಾಡರು. ಕೃಷಿಯನ್ನೇ ಆಧರಿಸಿ ಜೀವನೋಪಾಯ ನಡೆಸುತ್ತಿದ್ದರು. ಆದರೆ ದೇಶದ ಇತಿಹಾಸದಲ್ಲಿ ಈ ಕೃಷಿ ಸಂಸ್ಕೃತಿಯನ್ನು ಅವಲಂಬಿಸಿದವರ ಬದುಕು ಎಲ್ಲಿಯೂ ಪ್ರಾಮುಖ್ಯತೆ ಪಡೆದುಕೊಳ್ಳಲಿಲ್ಲ.

ಬತ್ತಾಡರು ಕೋಟ ಸಾಲಿಗ್ರಾಮ, ಕೋಟೇಶ್ವರ, ಪಶ್ಚಿಮ ಘಟ್ಟ ಮತ್ತು ಪೂರ್ವಘಟ್ಟಗಳ ವ್ಯಾಪ್ತಿಯಲ್ಲಿ ಹೆಚ್ಚು ಕಂಡು ಬರುತ್ತಾರೆ. ಸಾಲಿಗ್ರಾಮ ಮತ್ತು ಕೋಟ ಪರಿಸರದಲ್ಲಿ ಅಧಿಕ ಸಂಖ್ಯೆಯಲ್ಲಿ ವಾಸವಾಗಿದ್ದಾರೆ.

ಮಧ್ಯಮ ಎತ್ತರ, ದೈಹಿಕವಾಗಿ ಗಟ್ಟಿ ಮುಟ್ಟಾಗಿದ್ದು, ಸಾಮಾನ್ಯವಾಗಿ ಎಣ್ಣೆಗಪ್ಪು ಮತ್ತು ಗೋಧಿ ಬಣ್ಣವನ್ನು ಹೊಂದಿದ್ದಾರೆ. ಇವರ ಮಾತೃಭಾಷೆ ಕನ್ನಡ. ಘಟ್ಟ ಪ್ರದೇಶದಲ್ಲಿ ವಾಸವಾಗಿರುವ ಜನರು ಅಲ್ಲಿಯ ಶಿವಮೊಗ್ಗೆಯ ಕನ್ನಡ ಭಾಷೆಯನ್ನು ನಿರರ್ಗಳವಾಗಿ ಮಾತನಾಡುತ್ತಾರೆ.

ಬತ್ತಾಡ ಎಂಬುದು ಜಾತಿ ಸೂಚಕ ಪದವಾಗಿ ಕರೆಯುತ್ತಿದ್ದರೂ ಕೂಡ ಬತ್ತಾಡ ಶಬ್ದ ವೃತ್ತಿ ಸೂಚಕಪದವಾಗಿದೆ. ಬತ್ತದ ಅಡವನ್ನು ತೆಗೆಯುವವರು, ಭತ್ತ ಕುಟ್ಟುವವರು, ಬತ್ತವನ್ನು ಅಡುವವರು (ಬೇಯಿಸು) ಎನ್ನುವ ಶಬ್ದದಿಂದ ನಿಷ್ಪನ್ನಗೊಂಡಿದೆ. ಬತ್ತದ ಬಣಸಾಲೆಯಲ್ಲಿ ಈಗಲೂ ಈ ಕಾರ್ಯವನ್ನು ಮಾಡುವವರಿದ್ದಾರೆ. ಭತ್ತದ ಗದ್ದೆಯಲ್ಲಿ ಕೂಲಿ ಮಾಡುವವರು, ಬತ್ತದ ಗದ್ದೆಯಲ್ಲಿ ಬಿದ್ದಿರುವ ಬತ್ತವನ್ನು ಗುಡಿಸುವವರು ಎಂದರ್ಥವಿದೆ. ಬೆತ್ತವನ್ನು ಕೊಯ್ಯುವ ಕೆಲಸ ಮಾಡುವುದರಿಂದ ಬತ್ತಾಡ ಬಂದಿದೆ. ಬತ್ತಾಡರ ಆಚರಣೆಗಳು ಮತ್ತು ಆರಾಧನೆ

ಅಧ್ಯಯನದ ಆಧಾರದಿಂದ ಬತ್ತಾಡ ಸಂಸ್ಕೃತಿ ಮತ್ತು ಸಂಸ್ಕೃತಿಯ ಬಗೆಗಿನ ಹೊಸ ಅರ್ಥವನ್ನು ಗ್ರಹಿಸಬಹುದು. ಬತ್ತಾಡರು ಗ್ರಾಮ ವಾಸಿಗಳು ಬ್ರಾಹ್ಮಣ ಮತ್ತು ಶ್ರೀಮಂತರ ಮನೆಯ ಗದ್ದೆಗಳಲ್ಲಿ ಒಕ್ಕಲುಗಳಾಗಿ ದುಡಿದವರು. ಅಳಿಯ ಕಟ್ಟಿನ ಸಮಾಜದವರು. ಬತ್ತಾಡ ಜಾತಿಯ ಹೆಸರನ್ನು ಹೋಲುವ ಜಾತಿಗಳು ತಮಿಳುನಾಡು, ಕೇರಳಗಳಲ್ಲಿ ಕಂಡು ಬರುತ್ತವೆ. ಆದರೆ ಈ ಜಾತಿಗಳ ನಡುವೆ ಯಾವುದೇ ಸಂಬಂಧಗಳು ಕರ್ನಾಟಕದಲ್ಲಿ ವಾಸವಾಗಿರುವ ಬತ್ತಾಡ ಜನಾಂಗದವರಿಗೆ ಇರುವುದಿಲ್ಲ. ಈ ಸಂಶೋಧನೆಯ ವ್ಯಾಪ್ತಿ ಉಡುಪಿ ಜಿಲ್ಲೆ ಮತ್ತು ಶಿವಮೊಗ್ಗ ಜಿಲ್ಲೆ ಮಾತ್ರವಾಗಿದೆ. ಬತ್ತಾಡ ಜನಾಂಗದವರೊಂದಿಗೆ ನೆಲೆಸಿರುವ ಇತರೇ ಪರಿಶಿಷ್ಟ ಜಾತಿಯ ಜನಾಂಗದವರೊಂದಿಗೆ ಸಾಂಸ್ಕೃತಿಕವಾಗಿ ಹೇಗೆ ಭಿನ್ನರಾಗಿದ್ದಾರೆನ್ನುವುದನ್ನು ಇಲ್ಲಿ ಗಮನಿಸಲಾಗುವುದು. ಉಡುಪಿ ಜಿಲ್ಲೆಯಲ್ಲಿರುವ ಬತ್ತಾಡ ಜನಾಂಗದ ಸಂಸ್ಕೃತಿ ಮತ್ತು ಶಿವಮೊಗ್ಗದಲ್ಲಿ ನೆಲೆಸಿರುವ ಬತ್ತಾಡರ ಜೀವನಾವೃತ್ತವನ್ನು ತುಲನೆ ಮಾಡಲಾಗುವುದು.

ಬ್ರಿಟಿಷರು ಬಿಟ್ಟುಹೋದ ಶಿಕ್ಷಣ ಪದ್ಧತಿಯನ್ನು ಮೇಲ್ಪಂಕ್ತಿಯವರು ಯಥಾವತ್ತಾಗಿ ಮುಂದುವರಿಸಿದರು. ಭಾರತದಲ್ಲಿ ಹಿಂದಿನಿಂದ ಆಡಳಿತ ಮಾಡಿಕೊಂಡು ಬಂದ ಅದೇ ಮೇಲ್ಪಂಕ್ತಿಯ ವ್ಯವಸ್ಥೆಯು ತಮ್ಮದೇ ಆದ ಆಡಳಿತ ಮತ್ತು ರಾಜಕೀಯ ಪಕ್ಷಗಳನ್ನು ಸ್ವಾತಂತ್ರ್ಯದ ನಂತರ ಸ್ಥಾಪನೆ ಮಾಡಿಕೊಂಡಿತು. ಇದರಿಂದ ಪ್ರಾಚೀನ ಮನೋಧರ್ಮ ಏನಿದೆಯೋ ಅದೇ ಹೊಸ ನಿಯಮವನ್ನು ಸೃಷ್ಟಿಮಾಡಿದವು. ಕೆಳಜಾತಿಯನ್ನು ಶೋಷಣೆ ಮಾಡಿದ ಮೇಲ್ಜಾತಿ ಮತ್ತು ಮೇಲ್ವರ್ಗ ಇವೆರಡು ಬೇರೆ ಬೇರೆ ಅಲ್ಲ. ಒಂದೇ ನಾಣ್ಯದ ಎರಡು ಮುಖಗಳಂತೆ ಅವೆರಡೂ ಕೂಡ ಒಂದೇ ಮನೋಭಾವನೆಯನ್ನು ಹೊಂದಿವೆ. ಶೋಷಣೆ ಮಾಡುವಾಗ ಈ ಎರಡು ವರ್ಗವು ಒಬ್ಬರಿಗೊಬ್ಬರು ಕೆಲವೊಮ್ಮೆ ನೆರವಾಗುತ್ತಾರೆ. ಆದರೆ ಭಾರತದ ಮೂಲ ನಿವಾಸಿಗಳು ಎನಿಸಿಕೊಂಡ ಕೆಳಸ್ತರದವರು, ಬುಡಕಟ್ಟು ಜನರು ಮತ್ತು ಹಿಂದುಳಿದ ವರ್ಗದವರು ತಮ್ಮದೇ ಆದ ಒಂದು ಜೀವನ ಕ್ರಮವನ್ನು ಹೊಂದಿದ್ದಾರೆ. ಅವರಿಗೆ ಅವರದೇ ಆದ ಸಂಸ್ಕೃತಿಯು ಇದೆಯೆನ್ನುವುದನ್ನು ಎಲ್ಲಿಯೂ ಗುರುತಿಸದೇ ಅವರನ್ನು ತುಳಿತಕ್ಕೆ ಒಳಮಾಡಿರುವುದನ್ನು ನಾವು ಇತಿಹಾಸವನ್ನು ಅಧ್ಯಯನ ಮಾಡಿದರೆ ತಿಳಿಯುತ್ತದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಧ್ಯಯನ ಬಹಳವಾಗಿ ನಡೆದಿದೆ. ಆದರೆ ಅವರ ಮೂಲ, ಭಾಷೆ, ಉಡುಗೆ-ತೊಡುಗೆ, ಆಚರಣೆಗಳನ್ನು ಅಧ್ಯಯನ ಮಾಡಿದರೇ ವಿನಃ ಅವರ ಸಮಾಜವನ್ನು ಮುಖ್ಯ ವಾಹಿನಿಗೆ ತರಬೇಕೆನ್ನುವ ಭಾವನೆ ಯಾವ ಅಧ್ಯಯನಕಾರರಲ್ಲಿ ಮತ್ತು ಸಂಶೋಧಕನಲ್ಲಿಯೂ ಇರಲಿಲ್ಲ. ಆ ವರ್ಗದಲ್ಲಿ ಹುಟ್ಟಿದ ಜನರು ತಮ್ಮ ಬದುಕಿನುದ್ದಕ್ಕೂ ಮೇಲ್ವರ್ಗದ ತುಳಿತಕ್ಕೆ ಒಳಗಾಗಿ

ಯಾತನೆಯನ್ನು ಅನುಭವಿಸಿದರು. ಕಾಲ ಸರಿದಂತೆ ಈ ಸಮುದಾಯ ತಾವು ಉರುಳಿ ಬಂದ ದಾರಿಯನ್ನು ಒಮ್ಮೆ ತಿರುಗಿ ನೋಡಲಾರಂಭಿಸಿದರು. ಇದಕ್ಕೆಲ್ಲ ಕಾರಣವೇನೆಂದರೆ ಶೋಷಿತ ಸಮಾಜದವರು ಅವೈದಿಕ ಸಂಪ್ರದಾಯದಿಂದ ಬಂದವರು. ಹಾಗಾಗಿ ವೈದಿಕ ವ್ಯವಸ್ಥೆಯು ಅವರಿಗೆ ಸಮಾಜದಲ್ಲೆಲ್ಲಿಯೂ ಅವಕಾಶಗಳನ್ನು ಕೊಡಲಿಲ್ಲ. ಶೋಷಿತರು ಕೇವಲ ದುಡಿಮೆಯೇ ದೇವರೆಂದು ತಿಳಿದು ಇಲ್ಲಿಯವರೆಗೆ ಬದುಕನ್ನು ಸವೆಸುತ್ತಾ ಬಂದರು.

**ಪರಾಮರ್ಶನ ಗ್ರಂಥಗಳು:**

1. ಎಡ್ಗರ್ ಥರ್ಸ್ಟನ್ & ರಂಗಾಚಾರಿ ಕೆ. (ಮೂಲ), ಮರುಳಸಿದ್ದಪ್ಪ ಕೆ. (ಪ್ರ.ಸಂ.), ಬಂಜಗೆರೆ ಜಯಪ್ರಕಾಶ (ಸಂ), (2019), ದಕ್ಷಿಣ ಭಾರತದ ಜಾತಿ ಮತ್ತು ಬುಡಕಟ್ಟುಗಳು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.
2. ಸಿಂಗ್ ಕೆ.ಎಸ್., (1999), ದಿ ಶೆಡ್ಯೂಲ್ಡ್ ಕಾಸ್ಟ್ (ಪೀಪಲ್ ಆಫ್ ಇಂಡಿಯಾ): ಸಂಪುಟ–೨, ಆಕ್ಸಫರ್ಡ್ ಯುನಿವರ್ಸಿಟಿ ಪ್ರೆಸ್, ಇಂಗ್ಲೆಂಡ್.
3. ಮ್ಯಾಥ್ಯೂ ಅರ್ನಾಲ್ಡ್, (1869), ಕಲ್ಚರ್ ಆಂಡ್ ಆ್ಯನಾರ್ಚಿ, ಕೇಂಬ್ರಿಜ್ ಯುನಿವರ್ಸಿಟಿ ಪ್ರೆಸ್, ಇಂಗ್ಲೆಂಡ್.
4. ರಾಮಚಂದ್ರನ್ ಸಿ.ಎನ್., (2000), ವಸಾಹತೋತ್ತರ ಚಿಂತನೆ, ಕರ್ನಾಟಕ ಸಾಹಿತ್ಯ ಅಕೆಡಾಮಿ, ಬೆಂಗಳೂರು.
5. ಪುರುಷೋತ್ತಮ ಬಿಳಿಮಲೆ, (2019), ಸುಳ್ಯ ಪರಿಸರದ ಗೌಡ ಸಮುದಾಯದ ಸಾಂಸ್ಕೃತಿಕ ಅಧ್ಯಯನ, ಆಕೃತಿ ಆಶಯ ಪಬ್ಲಿಕೇಶನ್ಸ್, ಮಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.